**ಅಸಲು ದಾವಾ ಸಂಖ್ಯೆಃ -187/2025** **ಪಿ.ಡಬ್ಲ್ಯೂ:-1**

ದಿನಾಂಕಃ **04.03.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಒಕ್ಕಣೆಗಳು ಆಂಗ್ಲ ಭಾಷೆಯಲ್ಲಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ವಕೀಲರಿಗೆ ನಾವು ಕನ್ನಡದಲ್ಲಿ ಹೇಳಿದ್ದೆವು ಅವರು ಆಂಗ್ಲ ಭಾಷೆಯಲ್ಲಿ ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಿಚಾರಗಳನ್ನು ನಮ್ಮ ವಕೀಲರಿಂದ ಓದಿಸಿ ತಿಳಿದುಕೊಂಡಿದ್ದೇವೆ. ಸಾಕ್ಷಿಗೆ ರೋಡಗುತ್ತಿ ಬಸವಣ್ಯಪ್ಪ ಬಿನ್ ದೊಡ್ಡಪ್ಪರವರು ನಿಮಗೆ ಸಂಬಂಧದಲ್ಲಿ ಏನು ಆಗಬೇಕು ಅಂದರೆ ಸಾಕ್ಷಿಯು ನಾನು ಅವರಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇನೆ ವಿನಃ ನಮಗೂ ಮತ್ತು ಅವರಿಗೂ ಯಾವುದೇ ಸಂಬಂಧ ಇರುವುದಿಲ್ಲ. ಗೀತಾ ಕೋಂ ಅಶೋಕ ಯಾರು ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಗೀತಾರವರಿಗೆ ಅತ್ತೆಯಾಗಬೇಕು ಎಂದರೆ ನನಗೆ ಗೊತ್ತಿಲ್ಲ. ಈಶಪ್ಪ 2 ನೇ ಪ್ರತಿವಾದಿ ಗೀತಾರವರಿಗೆ ಮಾವರಾಗಬೇಕು ಅಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಗೀತಮ್ಮರವರ ತಂದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಪ್ರಸ್ತುತ ದಾವೆಯನ್ನು ಯಾಕೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಾವು ದಾವಾ ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದಾಗ ಪ್ರತಿವಾದಿಗಳು ತೊಂದರೆ ಕೊಟ್ಟಿದ್ದರಿಂದ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಕೊನಾಯಕನಹಳ್ಳಿ, ಪಶ್ಚಿಮಕ್ಕೆ ಸ್ಮಶಾನ, ಉತ್ತರಕ್ಕೆ ಮಾಯಪ್ಪ ಮತ್ತು ಮಂಜಪ್ಪರವರ ಜಮೀನು, ದಕ್ಷಿಣಕ್ಕೆ ಗೀತಾರವರಿಗೆ ಸೇರಿದ ಸರ್ವೇ ನಂ.15/8.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.